ಅವರ ನಿರ್ದೇಶನದ ಪ್ರಕಾರ ಕಟ್ಟಡಕ್ಕೆ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಕಟ್ಟಡ ಕಟ್ಟಬೇಕಾದರೂ ಕೇವಲ ಪ್ರಾಥಮಿಕ ಶಾಲಾ ಕಟ್ಟಡವನ್ನು ಮತ್ತು ಅಂಗನವಾಡಿ ಕಟ್ಟಡವನ್ನು ಅವರ ನಿರ್ದೇಶನದ ಪ್ರಕಾರ ಕಟ್ಟಬೇಕೇ ಹೊರತು ಬೇರೆ ಕಟ್ಟುವುದಕ್ಕಾಗುವುದಿಲ್ಲ ಆದ್ದರಿಂದ ವಿಶೇಷ ಯೋಜನೆ ಎಂದು ಕಾರ್ಯಕ್ರಮಕ್ಕೆ ಪಂಜೂರಾತಿ ಕೊಟ್ಟಿದೆ. ಅವರು ಹೇಳುವುದು ನಿಜ. ಹಿಂದೆ ತಾಲ್ಲೂಕು ಬೋರ್ಡ್ ವತಿಯಿಂದ ಸಾಮುದಾಯಿಕ ಭವನವನ್ನು ಕಟ್ಟಬಹುದಾಗಿತ್ತು. ಇವತ್ತೂ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನವರು ಅವರ ಸಂಪನ್ಮೂಲದಿಂದ ಕಟ್ಟುವುದಕ್ಕೆ ಯಾವ ಅಭ್ಯಂತರವೂ ಇಲ್ಲ.

(ಶ್ರೀ ಎಂ. ಶಿವಣ್ಣ.—ಅವರು ಪ್ರಶ್ನೆ ಕೇಳಲು ಎದ್ದರು.)

ಅಧ್ಯಕ್ಷರು.—ಯಾರಿಗೂ ಎರಡಕ್ಕಿಂತ ಹೆಚ್ಚು ಸಾರಿ ಪ್ರಶ್ನೆ ಕೇಳಲು ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಶಿವಣ್ಣ.—ಹರಿಜನಗಿರಿಜನರು ಎಂದರೆ ಎಲ್ಲರಿಗೂ ಅಲಕ್ಷ್ಯ.

ಅಧ್ಯಕ್ಷರು.—ಇಲ್ಲ ಕೊಡುವುದಿಲ್ಲ.

ಕುಡಿಯುವ ನೀರಿನ ಯೋಜನೆಗಳು

೭೨೬. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನು ತೋಡಿಸುವ ಯೋಜನೆ ಯಾವ ವರ್ಷದಿಂದ ಪ್ರಾರಂಭವಾಯಿತು. ಹಾಗೂ ಇದುವರೆಗೂ ಎಷ್ಟು ಕೊಳವೆ ಭಾವಿಗಳನ್ನು ತೋಡಿಸಲಾಯಿತು ?

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಗ್ಗೆ ಯೋಜನೆ ಪ್ರಾರಂಭವಾದಾಗಿನಿಂದ ಈತನಕ ಪ್ರತಿವರ್ಷ ಎಷ್ಟೆಷ್ಟು ಭಾವಿಗಳನ್ನು ತೋಡಿಸಲಾಗಿದೆ.

(ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ

೧ ಸಂಪೂರ್ಣ ಕೇಂದ್ರದ ಸಹಾಯದಿಂದ ಹಾಗೂ

೨ ರಾಜ್ಯ ಮತ್ತು ಕೇಂದ್ರದ ಸಹಾಯದಿಂದ ಮತ್ತು

೩ ರಾಜ್ಯದ ಹಣಕಾಸಿನಿಂದ ಎಲ್ಲೆಲ್ಲಿ ಯಾವ ಯಾವ ಯೋಜನೆಯಡಿಯಲ್ಲಿ ಕುಡಿಯುವ ನೀರು ಪೂರೈಸುವ ಯೋಜನೆ ಪ್ರಗತಿಯಲ್ಲಿದೆ ಮತ್ತು ಎಲ್ಲೆಲ್ಲಿ ಕೆಲಸ ಪೂರ್ತಿಆಗಿದೆ ಹಾಗೂ ಪ್ರತಿ ಕೆಲಸಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು).—

(ಅ) ೧೯೭೦–೭೧ನೇ ಸಾಲಿನಿಂದ ಪ್ರಾರಂಭವಾಯಿತು. ಮೊದಲಿನಿಂದ ಡಿಸೆಂಬರ್ ೧೯೮೬ರ ಅಂತ್ಯದವರೆಗೆ ಒಟ್ಟು ೧,೧೬,೯೦೧ ಕೊಳವೆ ಭಾವಿಗಳನ್ನು ತೋಡಲಾಗಿದೆ.

(ಆ) ತೋಡಿದ ಕೊಳವೆ ಬಾವಿಗಳ ಸಂಖ್ಯೆ ೩೬೮೨ ಅವುಗಳಲ್ಲಿ ಸಫಲವಾದವುಗಳು ೨೫೫೫ ವರ್ಷವಾರು ಪಟ್ಟಿ ಲಗತ್ತಿಸಿದೆ.

(೧)

ವಲಯ		ತೆಗೆದುಕೊಂಡ ಯೋಜನೆಗಳು	ಪೂರ್ಣ ಗೊಂಡವು	ಪ್ರಗತಿಯಲ್ಲಿರುವುದು
ಕೇಂದ್ರ ವಲಯ.—				
(ಎ)	ಎ.ಆರ್.ಡಬ್ಲ್ಯೂ.ಎಸ್.	೧೬	೫	೧೧
(ಬಿ)	ಕಿರು ನೀರು ಸರಬರಾಜು ಯೋಜನೆ	೩೧	೧೬	೧೫
ರಾಜ್ಯ ವಲಯ.—				
(ಎ)	ರಾ.ಗ್ರಾ ನೀ ಸರಬರಾಜು ಯೋಜನೆ	೮೩	೪೫	೩೮
(ಬಿ)	ಕಿರು ನೀರು ಸರಬರಾಜು ಯೋಜನೆ	೪೦	೨೭	೧೩

ವಿವರಗಳು ಅನುಬಂಧ ೨ ಮತ್ತು ೩ರಲ್ಲಿದೆ.

ANNEXURE--I

Statement showing the borewell drilled in Uttara-Kannada District from inception to end of December 1986 (Yearwise).

Sl. No.	Year	No. of borewells sunk	No. of borewells sucessful.
1	1970-71	...	...
2	1971-72	...	...
3	1972-73	43	33
4	1973-74	...	...
5	1974-75	10	7
6	1975-76	27	24
7	1976-77	134	108
8	1977-78	121	89
9	1978-79	110	95
10	1979-80	309	258
11	1980-81	360	304
12	1981-82	407	325
13	1982-83	615	496
14	1983-84	342	309
15	1984-85	804	692
16	1985-86	264	246
17	1986-87 (to end of December 1986)	136	129
	Total	3682	3115

ANNEXURE—II

Statement showing the details of Piped water supply schemes under State and Central Sector Programme.—

UTTARA KANNADA DISTRICT

Sl. No.	Name of Taluk	Name of village	Name of sector	Estimated cost Rs. in lakhs	Remarks
1	2	3	4	5	6
1	Ankola	Vandige	Central	2.83	Completed
2		Algeri	State	2.76	Completed
3		Agasur	State	4.96	-do-
4		Aversa	-do-	3.00	-do-
5		Bobruwada	-do-	2.94	-do-
6		Bedse Harwada	State	4.00	Under progress
7			-do-	3.95	-do-
8	Bhatkal	Bailur	State	7.18	Under progress
9		Shiralli-I	-do-	9.73	-do-
10		Kaikani	-do-	9.40	-do-
11		Shiralli-II	-do-	2.90	-do-
12		Belke	-do-	2.54	-do-
13		Heble	-do-	6.30	-do-
14	Haliyal	Dusgi	Central	1.56	Completed
15		Gundolli	-do-	1.74	-do-
16		Havagi	State	1.89	-do-
17		Alur	-do-	0.268	-do-
18		Mangalwad	-do-	1.787	-do-
19		Aralawada	-do-	0.84	-do-
20		Bhagavati	-do-	0,927	-do-
21		Yedoga	-do-	1.00	-do-
22		Hunswada	-do-	0.795	-do-
23		Karlakatti	-do-	0.50	-do-
24		Sambrani	-do-	0.98	-do-
25		Satenahalli	-do-	0.98	-do-
26		Tergaon (Aug.)	-do-	3.3	-do-

1	2	3	4	5	6
27		Janaga	Central	2.00	Under progress
28		Haldipur-I,II,III	-do-	7.59	-do-
29		Manki	-do-	14.00	-do-
30		Murkwada	State	1.99	-do-
31		B.K. Halli	-do-	2.59	-do-
32		Belwatigi	-do-	2.527	-do-
33	Honnavar	D.K. Temple	State	1.00	Completed
34		Karki	-do-	6.63	Under progress
35		Hereangudi	-do-	1.90	-do-
36		Kasaragoa	-do-	3.00	-do-
37		Manki	Central	13.24	-do-
38	Karwar	Arga	State	3.80	Gompleted
39		Amdalli	-do-	4.84	-do-
40		Binaga	-do-	3.275	-do-
41		Chandiya	-do-	4.86	-do-
42		Todur	-do-	1.96	-do-
43		Mallapur	-do-	2.90	Under progress
44		Kadwad	-do-	4.00	-do-
45		Kinnar	-do-	8.55	-do-
46		Ghadsai Halga	Central	3.83	-do-
47	Kumta	Kidakani	State	2.99	Completed
48		Madangeri	Central	2.91	-do-
49		Kujalli	State	3.39	-do-
50		Mirzan (Aug)	-do-	3.27	-do-
51		Gokarna	-do-	3.87	-do-
52		Gekarna (Aug)	Central	5.50	Under progress
53		Antravalli	-do-	2.80	-do-
54		Hegde	-do-	4.36	-do-
55		Aghanashini	State	3.34	-do-
56		Kagal	-do-	4.32	-do-
57		Murur	-do-	5.15	-do-
58		Hiregutti	-do-	4.52	-do-
59		Holangadde	-do-	4 84	-do-
60		Bargi Kimmani	-do-	2.88	-do-
61	Mundgod	Malagi	State	2 22	Completed
62		Hunugund I Stage	State	0.932	-do-

63		Pala I Stage	-do-	2.50	-do-
64		Chigalli I Stage	-do-	1.725	-do-
65		Indoor	-do-	0.738	-do-
66		Koppa (Indoor)	-do-	0.50	-do-
67		Katur	-do-	0.671	-do-
68		Katur (Aug.)	State	2.40	Under progress
69		Indoor (Aug,)	-do-	2.67	-do-
70		Onikere	Central	1.88	-do-
71		Nandikatta	-do-	3.39	-do-
72		Bachanki	State	2.27	-do-
73		Chigalli II Stage	-do-	2.98	-do-
74		Pala II Stage	-do-	2.96	-do-
75		Koppa (Indoor) Aug.	-do-	2.66	-do-
76		Hungund (Aug)	-do-	4.50	-do-
77	Siddapur	Bilagi	State	1.90	Completed
78		Betakani	-do-	1.689	-do-
79		Kolsirsi	-do-	2.38	-do-
80		Manmane	Central	1.90	Under progress
81		Halgeri Hosur	State	4.15	-do-
82		Siralgi	-do-	2.80	-do-
83		Kungod	-do-	2.70	-do-
84		Itagi	-do-	0.85	-do-
85		Bedgani	-do-	1.69	-do-
86	Sirsi	Banavasi	State	2.45	Completed
87		Hainch arta-Hulekal	-do-	1.77	-do-
88		Hegdekatta-Shivalli Shivagam	-do-	2.36	-do-
89		Bisalkoppa Bandangod	State	2.15	Under progress
90		Dassankoppa	-do-	3.42	-do-
91	Supa	Jagalbet	State	1.27	Completed
92		Ulvi	-do-	2.46	-do-
93		Castle Book	-do-	5.17	-do-
94		Joida	-do-	10.165	-do-
95		Virnoli	-do-	0.50	Under progress

1	2	3	4	5	6
96	Yellapur	Kalache	Central	1.28	Completed
97		Arabail-Gullapur	State	2.60	-do-
98		Kirawatti	-do-	3.057	-do-
99		Manchikeri	-do-	0.657	-do-
			No.	Estimated Cost	
	Completed schemes :	Central	5	10.32 lakhs	
		State	45		
	Schemes in progress :	Central	11		
		State	38		
			99		

ANNEXURE—III

Statement showing the details of Mini water supply scheme under State and Central Sectors Programmes.

DISTRICT : UTTARA KANNADA

Sl.	Name of Tal k	Name of Village	Name of Sector	Estimated Cost	Remarks
1	2	3	4	5	6
1	Ankola	Sakalben	Central	Rs. 32,500/	Scheme completed
2	Ankola	Laxmeshwar	Central	70,000/	Scheme Completed
3	do	Shirur	do	Between Rs. 45,000/	Under Progress
4	do	Shirkurli	S. Sector	9[illegible],000	do
5	do	Hattikeri	do		do
6	Bhatkal	Purvarsa	C. Sector	46,100	Completed
7	do	Mudabhatkal	S. Sectors	Between 45,000	Undertaking
8	do	Sumuda-bhatkal	do	92,000	Completed

1	2	3	4	5	6
9	Haliyal	Kavalwad	Central	78,800	Completed
10	do	Mundwad	S. Sector & Scarcity	56,700	Completed
11	do	Kuraed Kenchanahalli	Central	Between	Under progress
12	do	Amenakoppa	do		do
13	do	Kerawad	do	45,000	do
14	do	Kerlagi	do	to	do
15	do	Nandigaddi	S. Sector	92,000	do
16	do	Datwani	do		do
17	Honnavar	Mugwa	Central	46,100	Completed
18	do	Balkur	do	44,150	do
19	do	Kadioka	do	98,900	do
20	do	Navilgaon	State & Scarcity	60,000	do
21	do	Kekkar	do	49,950	do
22	do	Karwa	do	44,000	do
23	Karwar	Chittakula	Central	49,800	Completed
24	do	Shirawad	Central	49,850	Completed
25	do	Katar	do	26,800	do
26	do	Karwadi	do	51,800	do
27	do	Asnoti	do	50,900	do
28	do	Bhaire	State and Scarcity	60,000	do
29	do	Binaga	do	58,000	do
30	do	Amadslli	do	46,300	do
31	do	Siddar	do	91,600	do
32	do	Chendiya	do	53,700	do
33	do	Hosalli	do	89,450	do
34	do	Mudageri	do	62,000	do
35	do	Bolashetta	do	Between	Under progress
36	do	Hadin	do	Rs. 45,000	do
37	do	Muthalmari	do	to 92,000	do
38	Kumta	Divigi	Central	43,700/-	Completed
39	do	Gudesnagadi	do	40,300/-	do
40	do	Betkuli	do	86,100/-	do
41	do	Bhavikodla	State	60,600/-	do

1	2	3	4	5	6
42	do	Lukkeri	Central	Between	Under progress
43	do	Padavoli	Central	45,000/-	do
44	do	Kalladde	Central	to 92,000/-	Completed
45	Mundgod	Hungund	State	60,000/-	do
46	do	Chowdalli	State	80,800/-	do
47	do	Singanahalli	Central	Between 45,000/-	Under progess
48	do	Kalkeri	State	to 92,000/-	do
49	Sirsi	Isloor	State	60,000/-	Complited
50	do	Andagi	do	80,200/-	do
51	do	Hebbatti	State	43,000/-	do
52	do	Larpor	State	Between 45,000/- to Rs.92,000/-	Under progress
53	Siddapur	Kyadagi	Central	47,000/-	Completed
54	do	Itagi	State	45,800/-	do
55	do	Arendur	Central	Between 45,000/- to Rs. 92,000/-	Under progress
56	do	Garihalli-Kansoor			do
57	Supa	Virnoli	State	49,500/-	Completed
58	do	Divalli	State	68,000/-	do
59	do	Katelikir-wathi	do	50,000/-	do
60	do	Gund	Central	Between	Under progress
61	do	Kateli	do	45,000/-	do
62	do	Anamod	State	to Rs.92,000/-	do
63	Yellapur	Hosalli	State	52,400/-	Completed
64	do	Umachagi	do	78,800/-	do
65	do	Mavinkatta	do	50,000/-	do
66	do	Mavalli	do	71,900/-	do
67	do	Hunshetti	do	84,900/-	do
68	do	Vajralli	do	42,000-	do
69	do	Kenchana-halli	Central	Between 45,000/-	Under progress

70	do	Hutkhandi	do	to	do
71	do	Venka	do	92,000/-	do
				Estimated cost	

Completed Schemes :	Central	16 Nos	8,23,050
	State	27 Nos	16,60,600/-
Schemes is progress :	Central	15	
	State	13	
	Total	71	

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ, ೧೯೫೩-೮ಳರ ನಂತರ ಈವರೆಗೆ ರಾಜ್ಯದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಲಾಗಿದೆ ? ಇದು ಒಂದನೇ ಪ್ರಶ್ನೆ. ಉತ್ತರದಲ್ಲಿ ಒಟ್ಟು ೧,೧೬,೯೧೧ ಕೊಳವೆ ಬಾವಿಗಳನ್ನು ತೋಡಲಾಗಿದೆ ಎಂದು ಹೇಳಿದ್ದಾರೆ. ಈ ಬೋರ್‌ವೆಲ್‌ಗಳನ್ನು ತೋಡುವುದಕ್ಕೆ ಸೆಂಟ್ರಲ್ ಗೌರ್ನಮೆಂಟ್ ಏಡ್ ಎಷ್ಟು ? ರಾಜ್ಯ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು ? ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕಿನಲ್ಲಿ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ಈವರೆಗೆ ಒಂದು ಕೆಲಸವೂ ಕಂಪ್ಲೀಟ್ ಆಗಿಲ್ಲ. ಉಳಿದ ತಾಲ್ಲೂಕಿನಲ್ಲಿ ಕಂಪ್ಲೀಟ್ ಆಗಿದೆ. ದೇಶಪಾಂಡೆಯವರು ಇರುವಂಥ ಹಳಿಯಾಳದಲ್ಲಿ ಹೆಚ್ಚು ಕಡಿಮೆ ಕೆಲಸ ಮುಗಿದಿದೆ. ಆದರೆ ಹೊನ್ನಾವರ ಮತ್ತು ಭಟ್ಕಳದಲ್ಲಿ ಒಂದು ಕೆಲಸವೂ ಕಂಪ್ಲೀಟ್ ಆಗದೇ ಇರುವುದಕ್ಕೆ ಕಾರಣ ಏನು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ೧೯೫೩-೮ಳರಿಂದ ವರ್ಷ ವರ್ಷ ಖರ್ಚು ಮಾಡಿದ ವಿವರ ಇಲ್ಲ. ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಅವರ ಕ್ಷೇತ್ರವಾದ ಹೊನ್ನಾವರದಲ್ಲಿ ಒಂದು ಕೆಲಸವೂ ಮುಗಿದಿಲ್ಲ, ಕಾರಣ ಏನು ಎಂದು ಕೇಳಿದ್ದಾರೆ. ನನ್ನಲ್ಲಿ ಆ ಮಾಹಿತಿ ಇಲ್ಲ. ಕಾರಣ ಏನು ಎಂದು ವಿಮರ್ಶೆ ಮಾಡಿ ಕೆಲಸ ಮುಗಿಯದಿದ್ದರೆ ತುರ್ತಾಗಿ ಯಾವುದು ಆಗ ಬೇಕೋ ಅದನ್ನು ಮಾಡುವಂತೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ, ಒಂದು ಉತ್ತರ ಕೊಡುವುದಕ್ಕೆ ಆವರು ತಯಾರಾಗಿಲ್ಲ. ಬೋರ್‌ವೆಲ್ ತೋಡಿಸುವುದಕ್ಕೆ ಕೇಂದ್ರಸರ್ಕಾರದಿಂದ ಈ ರಾಜ್ಯಕ್ಕೆ ಈತನಕ ಎಷ್ಟು ಹಣ ಬಂದಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್,—ಆ ಅಂಕಿಅಂಶ ನನ್ನ ಹತ್ತಿರ ಇಲ್ಲ. ಅವರು ತಿಳಿದುಕೊಳ್ಳಬೇಕು. ಕೇಂದ್ರ ವಲಯ ಮತ್ತು ರಾಜ್ಯ ವಲಯ ಎಂದು ಎರಡು ಭಾಗ ಇರುತ್ತದೆ. ಕೇಂದ್ರ ಸರ್ಕಾರ ದವರು ಒಂದು ಯೋಜನೆ ಮಾಡಿಕೊಂಡು ಅದರಂತೆ ಮಂಜೂರಾತಿ ಕೊಡುತ್ತಾರೆ. ಎ.ಆರ್.ಡಬ್ಲ್ಯು.ಎಸ್. ಎಂದು ಒಂದು ಯೋಜನೆ ಕೇಂದ್ರ ವಲಯದ್ದು ಇದೆ. ಅದಕ್ಕೆ ೧೧ ಕೋಟಿ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದಾರೆ. ಮಂಜೂರಾಗಿರುವ ಕೆಲಸ ೧೩೦ ಕೋಟಿ ರೂಪಾಯಿ. ಎ.ಆರ್.ಡಬ್ಲ್ಯು.ಎಸ್. ಯೋಜನೆಯಲ್ಲಿ ಕೇಂದ್ರಸರ್ಕಾರ ಬಿಡಗಡೆ ಮಾಡಿರತಕ್ಕದ್ದು ೧೧ ಕೋಟಿ ರೂಪಾಯಿಗಳು. ಆದರೆ ಮಾಡಬೇಕಾಗಿರತಕ್ಕ ಕೆಲಸ, ಅಪ್ರೂವ್ ಆಗಿರುವುದು ೧೩೦ ಕೋಟಿ ರೂಪಾಯಿಗಳು, ಇದು ೧೯೮೦ರಲ್ಲಿ ಅಪ್ರೂವ್ ಆಗಿರುವ ಪ್ರಾಜೆಕ್ಟ್.

ಶ್ರೀ ಆರ್.ಎನ್. ನಾಯಕ್.—ನನಗೆ ಆ ಉತ್ತರ ಬೇಡ. ನಾನು ಕೇಳುವುದು ಬೋರ್ ವೆಲ್ ತೋಡುವುದಕ್ಕೆ ಮಾತ್ರ ಎಷ್ಟು ಹಣ ಕೊಟ್ಟಿದ್ದಾರೆಂದು ಕೇಳುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್,—ಆ ವಿವರಣೆ ಇಲ್ಲ. ಕಳುಹಿಸಿಕೊಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ.....

ಅಧ್ಯಕ್ಷರು,—ಅವರಿಗೆ ಅವಕಾಶ ಬೇಕಂತೆ.

ಶ್ರೀ ಆರ್. ಎನ್. ನಾಯಕ್.—ಒಂದು ಬೋರ್‌ವೆಲ್ ತೋಡುವುದಕ್ಕೆ ಎಷ್ಟು ಖರ್ಚಾಗುತ್ತದೆ? ಅದರಲ್ಲಿ ಕೇಂದ್ರದ ಪಾಲು ಎಷ್ಟು ? ರಾಜ್ಯದ ಪಾಲು ಎಷ್ಟು ? ಒಂದು ಬೋರ್‌ವೆಲ್‌ದಾದರೂ ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೇಂದ್ರ ವಲಯದಿಂದ ಇಂಥಿಂಥ ಗ್ರಾಮಕ್ಕೆ ಬೋರ್ ಹಾಕ ಬೇಕೆಂದು ಕೇಂದ್ರ ಸರ್ಕಾರ ಕೊಡುತ್ತದೆ. ಅದೇರೀತಿ ರಾಜ್ಯವಲಯದಿಂದಲೂ ಮಾಡುತ್ತೇವೆ. ಎಸ್,ಸಿ.ಪಿ.ಯಲ್ಲಿ ಯಾವುದು ಮಾಡಿದೆ. ಜನತಾ ಹೌಸಿಂಗ್ ಸ್ಕೀಂನಲ್ಲಿ ಯಾವುದು ಮಾಡಿದೆ ಎಂದು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಒಂದು ಬೋರ್‌ವೆಲ್‌ಗೆ ಕೇಂದ್ರದ್ದು ಎಷ್ಟು ಹಣ ರಾಜ್ಯದ್ದು ಎಷ್ಟು ಹಣ ಎಂದು ಇಲ್ಲ. ಆ ರೀತಿ ಪದ್ಧತಿ ಇಲ್ಲ. ಕೇಂದ್ರ, ರಾಜ್ಯ ಎರಡೂ ಸೇರಿ ಕಾರ್ಯಕ್ರಮ ಮಾಡುತ್ತದೆ.

ಶ್ರೀ ಆರ್.ಎನ್. ನಾಯಕ್.—ಎಲ್ಲ ಹಣ ಕೇಂದ್ರದಿಂದ ಬಂದಿದೆ ಅಂತ ಹೇಳುತ್ತೇನೆ ಒಪ್ಪಿ ಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲ ಈ ದೇಶದ ಜನರ ಹಣ. ನನ್ನದು ಅಲ್ಲ. ನಿಮ್ಮದು ಅಲ್ಲ. ಸಂವಿಧಾನಾತ್ಮಕವಾಗಿ ರಾಜ್ಯಕ್ಕೆ ಕೇಂದ್ರ ಸರ್ಕಾರ ಹಣವನ್ನು ಕೊಡಬೇಕಾಗುತ್ತದೆ. ಈ ರೀತಿ ಹಾರಾಡಬೇಡಿ, ನಮಗೂ ಹಾರಾಡುವುದಕ್ಕೆ ಬರುತ್ತದೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನೀವೂ ಹಾರಿ, ನಾನೂ ಹಾರುತ್ತೇನೆ. ಯಾರು ಮೇಲೆ ಹಾರುತ್ತೇನೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಇಷ್ಟನ್ನಾದರೂ ಹೇಳಲಿ ಮಾನ್ಯ ಮಂತ್ರಿಗಳು. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ ಹಾಗೂ ಸ್ಟೇಟ್ ಸೆಕ್ಟಾರ್ ಸ್ಕೀಂಗಳು ಎಂಬುದಾಗಿ ಇವೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಕೊಳವೆ ಬಾವಿಗಳನ್ನು ತೆಗೆದುಕೊಳ್ಳುತ್ತಾರೆ. ಮಿನಿ ವಾಟರ್ ಸಪ್ಲೈ ಯೋಜನೆಗಳನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ವೇರಿಯಸ್ ಪ್ರಾಜೆಕ್ಟ್‌ಗಳ ಬಗ್ಗೆ ಎಷ್ಟು ಹಣ ಕೇಂದ್ರದಿಂದ ರಾಜ್ಯಕ್ಕೆ ಬಂದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಲಿ. ಅದೇ ರೀತಿ ಸ್ಟೇಟ್ ಸೆಕ್ಟಾರ್ ಪತಿಯಿಂದ ಖರ್ಚು ಮಾಡಿರುವಂತಹ ಹಣ ಎಷ್ಟು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಈ ಪ್ರಶ್ನೆ ಹೋಗಬೇಕಾಗುತ್ತದೆ. ಇದಕ್ಕೆ ಪ್ಲಾನಿಂಗ್ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ನನ್ನ ಹತ್ತಿರ ಆ ದಾಖಲೆ ಗಳು ಇಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ರಾಜ್ಯದ ಯೋಜನೆಗಳಿಗೆ ಶೇಕಡ ೩೦ ರಷ್ಟು ಮಾತ್ರ ಕೇಂದ್ರದ ನೆರವು. ಇನ್ನುಳಿದ ೭೦ ರಷ್ಟು ಹಣ ರಾಜ್ಯದ ಸಂಪನ್ಮೂಲಗಳಿಂದ ಬರತಕ್ಕ ನೆರವು. ಆದು ರಾಜ್ಯಾಂಗಬದ್ಧವಾಗಿ ಇರತಕ್ಕ ಹಕ್ಕು. ರಾಜ್ಯವಿಲ್ಲದೆ ಕೇಂದ್ರ ಇಲ್ಲ. ಎಲ್ಲ ಈ ದೇಶದ ಜನರ ದುಡ್ಡು. ಅದನ್ನು ಸಂವಿಧಾನತ್ಮಕವಾಗಿ ಖರ್ಚು ಮಾಡಬೇಕು. ಅದೊಂದು ಸಂಪ್ರದಾಯ. ಇವತ್ತು ಎಂ.ಎಲ್.ಎ. ನಾಳೆ ಮಂತ್ರಿ. ಅದಿಲ್ಲದಿದ್ದರೆ ಯಾವುದೂ ಇಲ್ಲ.

ಶ್ರೀ ಆರ್.ಎನ್. ನಾಯಕ್.—ಈ ದೇಶದ ದುಡ್ಡು ಎಂದು ಹೇಳಿದ್ದಾರೆ. ಹಾಗಾದರೆ ಈ ದೇಶದ ಹಣ ಎಷ್ಟು ಹೊರಗೆ ಹೋಗುತ್ತಿದೆ ಎಂಬುದನ್ನು ಹೇಳುತ್ತೀರಾ ?

(ಗೊಂದಲ)

MR. SPEAKER.—It will not be recorded.